**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -738/2020**
**ಚಾಸಾ - 02** / ಪ್ರಾಸಾ - 02

| | |
|---|---|
| ಹೆಸರು | **ದೀಪಕ್** |
| ತಂದೆಯ ಹೆಸರು | **ಬೈರೇಗೌಡ** |
| ವಯಸ್ಸು | **30** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ 20-11-2025ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಸುಮಾರು 5 ವರ್ಷಗಳ ಹಿಂದೆ ಖಾಸಗಿ ಕೆಲಸದ ನಿಮಿತ್ತ ಪೋಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ಕೆಲವು ಖಾಲಿ ಹಾಳೆಗಳ ಮೇಲೆ ಸಹಿಯನ್ನು ಪಡೆದುಕೊಂಡರು. ಪೋಲೀಸರು ನನ್ನ ಸಮಕ್ಷಮಯದಲ್ಲಿ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ-2ಕ್ಕೆ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ನಿಪಿ-2ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ. 06-12-2019ರಂದು ಸಂಜೆ 4 ರಿಂದ 4.45 ಗಂಟೆ ಸಮಯದಲ್ಲಿ ಚಾಸಾ-1ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು

ಮಾಡಿ ನಿಮ್ಮ, ಚಾಸಾ-1 ಮತ್ತು ಚಾಸಾ-4ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಮುದ್ದೆ ಮಾಲು-1ನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಸಾಕ್ಷಿಗೆ ತಾನು ನೀಡಿರುವ ಹೇಳಿಕೆಯ ಭಾಗವಾದ "ನಾನು ಮೇಲ್ಕಂಡ ವಿಳಾಸದಲ್ಲಿ ----------------ಮತ್ತೆ ನೋಡಿದರೆ ಗುರುತಿಸುತ್ತೇನೆ" ಓದಿ ತಿಳಿಸಲಾಯಿತು. ಸಾಕ್ಷಿಯು ತಾನು ನೀಡಿರುವ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಸಿ. ಡಿ.ಪಿ, ವಕೀಲರಿಂದಃ-**

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -738/2020**
**ಚಾಸಾ - 04** / ಪ್ರಾಸಾ - 03

| | |
|---|---|
| ಹೆಸರು | **ಮಹೇಶ್** |
| ತಂದೆಯ ಹೆಸರು | **ಗಾಳಿ ಹನುಮಯ್ಯ** |
| ವಯಸ್ಸು | **29** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | ಸೊಂಡೆಕೊಪ್ಪ |

**ದಿನಾಂಕಃ 20-11-2025ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ನಿಪಿ-2ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಸುಮಾರು 5 ವರ್ಷಗಳ ಹಿಂದೆ ಖಾಸಗಿ ಕೆಲಸದ ನಿಮಿತ್ತ ಪೋಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ಕೆಲವು ಖಾಲಿ ಹಾಳೆಗಳ ಮೇಲೆ ಸಹಿಯನ್ನು ಪಡೆದುಕೊಂಡರು. ಪೋಲೀಸರು ನನ್ನ ಸಮಕ್ಷಮಯದಲ್ಲಿ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ-2ಕ್ಕೆ ನನ್ನನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ನಿಪಿ-2ರಲ್ಲಿ ಇರುವ ವಿಷಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.06-12-2019ರಂದು ಸಂಜೆ 4 ರಿಂದ 4.45 ಗಂಟೆ ಸಮಯದಲ್ಲಿ ಚಾಸಾ-1ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2ರಂತೆ ಪಂಚನಾಮೆಯನ್ನು ಮಾಡಿ ನಿಮ್ಮ, ಚಾಸಾ-1 ಮತ್ತು ಚಾಸಾ-2ರವರ ಸಹಿಯನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಮುದ್ದೆ ಮಾಲು-1ನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಸರಿಯಲ್ಲ

ಎನ್ನುತ್ತಾರೆ. ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ತಿಳಿದಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಪಾಟೀ **ಸವಾಲುಃ- ಆರೋಪಿಗಳ ಪರ ಶ್ರೀ.ಸಿ. ಡಿ.ಪಿ, ವಕೀಲರಿಂದಃ-**

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**